ಶ್ರೀ ಬಸವರಾಜ ಬೊಮ್ಮಾಯಿ : ನಾನು ಮಹಾರಾಷ್ಟ್ರದ ಮಂತ್ರಿಯವರ ಜೊತೆಯಲ್ಲಿ ಮಾತನಾಡುವಾಗ ಪ್ರಕಾಶ್ ಹುಕ್ಕೇರಿಯವರನ್ನು ಕಾಕಾಸಾಹೇಬ ರವರನ್ನು ಕೂಡ ಕರೆದುಕೊಂಡು ಹೋಗಿದ್ದೆ. ನಾವು ಈ ಬಗ್ಗೆ ಸ್ಪಷ್ಟವಾಗಿ ಹೇಳಿದ್ದೇವೆ. ನಮ್ಮ ನೀರು ಅಲ್ಲದೆ 4 ಟಿಎಂಸಿ ನೀರನ್ನು ಹೆಚ್ಚುವರಿಯಾಗಿ ಕೊಡಬೇಕು ಅದಕ್ಕೆ ಬೇಕಾಗಿರುವಂತಹ ಹಣವನ್ನು ಕೊಡುವುದಕ್ಕೆ ನಾವು ಸಿದ್ಧರಿದ್ದೇವೆ. ಕೂಡಲೇ ನೀವು ನೀರು ಬಿಡುಗಡೆ ಮಾಡಬೇಕೆಂದು ಅವರಿಗೆ writing ನಲ್ಲಿ ಕೊಟ್ಟು ಈ ಬಗ್ಗೆ one hour ಚರ್ಚೆಯನ್ನೂ ಸಹ ಮಾಡಿದ್ದೇವೆ. ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಅದಲ್ಲದೆ ಅಲ್ಲಿಯ ಮುಖ್ಯಮಂತ್ರಿಗಳು ಸಹ ಮಾತನಾಡಿದ್ದಾರೆ. ನಾನು ಇವತ್ತು ಅಲ್ಲಿಯ ನೀರಾವರಿ ಸಚಿವರು ಮತ್ತು ಮುಖ್ಯಮಂತ್ರಿಗಳ ಜೊತೆಯಲ್ಲಿ ತಕ್ಷಣ ಈ ಬಗ್ಗೆ ಮಾತನಾಡುವವನಿದ್ದೇನೆ. ಈ ಬಗ್ಗೆ ನನಗೆ ವಿಶ್ವಾಸವಿದೆ, ಇನ್ನೆರಡು ದಿನಗಳಲ್ಲಿ ಹೆಚ್ಚುವರಿ ನೀರು ಮತ್ತು ಕಾಲಮೋಡಿಯ ನೀರು ಎರಡೂ ಬಿಡಿಸುವಂತಹ ವಿಶ್ವಾಸ ನನಗಿದೆ. ನಾನು ಅದನ್ನೇ ಹೇಳುತ್ತಿದ್ದೇನೆ.

ಅಧ್ಯಕ್ಷರು : ಆಯಿತು.

4) ವಿಷಯ : ಸುನಿತ, ಪ್ರಥಮ ದರ್ಜೆ ಸಹಾಯಕಿಯವರನ್ನು ಅಮಾನತ್ತು ಮಾಡಿರುವ ಬಗ್ಗೆ

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸಿಪುರ) : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಕಂದಾಯ ಮಂತ್ರಿಗಳು ಹಾಗೂ ಮಾನ್ಯ ಮುಖ್ಯಮಂತ್ರಿಗಳನ್ನು ಈ ಸಂದರ್ಭದಲ್ಲಿ ಕೇಳುತ್ತೇನೆ. ಸುನಿತ, ಪ್ರಥಮ ದರ್ಜೆ ಸಹಾಯಕಿ ಅವರನ್ನು ದುರುದ್ದೇಶಪೂರಕವಾಗಿ ಸಸ್ಪೆಂಡ್ ಮಾಡಿದ್ದಾರೆ. ಅವರಿಗೆ ಮುಂಬಡ್ತಿಯನ್ನು ಕೊಡುತ್ತೇವೆ ಹಾಗೂ ಸಂಬಳವನ್ನು ಕೊಡುತ್ತೇವೆಂದು ಕಳೆದ ಸಾರಿ ಈ ಬಗ್ಗೆ ಹೇಳಿದ್ದರು. ಇವತ್ತಿನವರೆಗೆ ಅವರಿಗೆ ಸಂಬಳವೂ ಇಲ್ಲ ಮುಂಬಡ್ತಿಯನ್ನೂ ಸಹ ಕೊಟ್ಟಿರುವುದಿಲ್ಲ. ಅವರಿಗೆ ಬೇಕೆಂದು ಹೇಳಿ ಮಾಡಿದ್ದಾರೆ. ಅವರಿಗೆ ದುರುದ್ದೇಶ ಪೂರಕವಾಗಿ ಮಾಡುತ್ತಿದ್ದಾರೆ ಕೂಡಲೇ ಅವರಿಗೆ ಸಂಬಳವನ್ನು ಕೊಡಬೇಕು ಹಾಗೂ ಮುಂಬಡ್ತಿಯನ್ನು ಕೊಡಬೇಕೆಂದು ನಾನು ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯಮಂತ್ರಿಯವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ಈಗಾಗಲೇ ಈ ವಿಷಯದ ಬಗ್ಗೆ ಮಾನ್ಯ ಸದಸ್ಯರಾದ ರೇವಣ್ಣನವರು ಈ

ಹಿಂದೆಯೇ ಪ್ರಸ್ತಾಪ ಮಾಡಿದ್ದಾರೆ. ಆ ಹಿನ್ನೆಲೆಯಲ್ಲಿ ದಿನಾಂಕ: 4.7.2011 ಅವರನ್ನು ಅಮಾನತ್ತು ಮಾಡಿದ್ದರು. ಅದನ್ನು lienshift ಮಾಡಿ ಜುಲೈ ಮತ್ತು ಆಗಸ್ಟ್ ತಿಂಗಳಿಗೆ ಅವರಿಗೆ ಭತ್ಯೆಯನ್ನು ಕೊಟ್ಟಿರುವುದಿಲ್ಲ. ಈಗ ಡಿಸೆಂಬರ್ 2011ನೇ ಇಸವಿಯಲ್ಲಿ ಅವರಿಗೆ ಮತ್ತೆ posting ಕೊಟ್ಟು ಸೆಪ್ಟೆಂಬರ್ ಡಿಸೆಂಬರ್‌ನಲ್ಲಿ ಅವರಿಗೆ ಪಾವತಿಸಿರಲಿಲ್ಲ. ಆಗ technical problem ಇತ್ತು. ಈಗ ಸಂಪೂರ್ಣವಾಗಿ ಅವರಿಗೆ ಹಣವನ್ನು ಪಾವತಿಸಲು ಡಿ.ಸಿ. ಯವರು ತಹಶೀಲ್ದಾರ್‌ರವರಿಗೆ ಆದೇಶವನ್ನು ಕೊಟ್ಟಿದ್ದಾರೆ. ದಿನಾಂಕ: 6.7.2011 ರಂದು ಅವರಿಗೆ ಭತ್ಯೆಯೂ ಸಹ ಸಿಕ್ಕಿದೆ. ಅವರ ಮೇಲೆ ಒಂದು ದೋಷಾರೋಪಣಾ ಪಟ್ಟಿ ಇರುವುದರಿಂದ ಅವರ ವಿರುದ್ಧ ಇಲಾಖಾ ವಿಚಾರಣೆ ಪೂರ್ಣಗೊಂಡ ನಂತರ ಅವರಿಗೆ ಬಡ್ತಿಯನ್ನು ಕೊಡಲು ನಾವು ನಿಯಮಾನುಸಾರ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಹೆಚ್.ಡಿ. ರೇವಣ್ಣ : ಅವರಿಗೆ ದುರುದ್ದೇಶದಿಂದ ಮಾಡಿದ್ದಾರೆ.

ಶ್ರೀ ಎಸ್. ಸುರೇಶ್ ಕುಮಾರ್ : ದುರುದ್ದೇಶವೋ ಏನೋ ಗೊತ್ತಿಲ್ಲ. ಅವರ ಮೇಲೆ ಇಲಾಖಾ ವಿಚಾರಣೆಯು ನಡೆಯುತ್ತಿದೆ. ವಿಚಾರಣೆ ಮುಗಿದ ನಂತರ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಹೆಚ್.ಡಿ. ರೇವಣ್ಣ : ತಾವು ನಿರ್ದಿಷ್ಟವಾಗಿ ಮಾಡಿ. ಈ ಬಗ್ಗೆ ತಾವು ಕಾಲಮಿತಿಯನ್ನಾದರೂ ಹಾಕಿ. 15 ದಿವಸದಲ್ಲಿ ಮಾಡುತ್ತೀರೋ, ಅಥವಾ ಒಂದು ತಿಂಗಳಲ್ಲಿ ಮಾಡುತ್ತೀರೋ, ಈ ಬಗ್ಗೆ ದಯಮಾಡಿ ತಿಳಿಸಬೇಕು. ನೀವು 6 ವರ್ಷ ಇಟ್ಟುಕೊಂಡು ಬಿಟ್ಟರೆ ಹೇಗೆ?

5) ವಿಷಯ: ಹಾಸನದ ತಹಶೀಲ್ದಾರರ ಬಗ್ಗೆ ಆರೋಪ ಮಾಡಿರುವ ಬಗ್ಗೆ

ಶ್ರೀ ಹೆಚ್.ಎಸ್. ಪ್ರಕಾಶ್ (ಹಾಸನ) : ಹಾಸನದಲ್ಲಿ ತಹಶೀಲ್ದಾರ್ ರವರ ಬಗ್ಗೆ ಡಿ.ಸಿ. ಯವರು ಮತ್ತು ಮೈಸೂರಿನ ಪ್ರಾದೇಶಿಕ ಆಯುಕ್ತರು ಒಂದು complaint ಮಾಡಿದ್ದರು. ಸಾರ್ವಜನಿಕರಿಂದ ಬಂದಂಥ ಐದಾರು ಆರೋಪಗಳು ಸಾಬೀತಾಗಿವೆ. ನಾನು ಇದರ ಬಗ್ಗೆ ಮಾತನಾಡಲಿಕ್ಕೆ Revenue Secretary ಯವರ Chamber ಗೆ ಹೋದರೆ ರೆವಿನ್ಯೂ ಕಾರ್ಯದರ್ಶಿಯವರು ನನ್ನನ್ನು ಮೊದಲು ಕೇಳಿದ ಪ್ರಶ್ನೆ "ರೀ ನೀವ್ಯಾರ್ರೀ" ಎಂದು ಶಾಸಕರಿಗೆ ಒಂದು ಯೂನಿಫಾರಂ ಕೊಡಿ. ಒಂದು ಶರ್ಟ್ ಕೊಡಿ ಇಲ್ಲವೆ ಒಂದು ಬೋರ್ಡ್ ಕೊಡಿ, ಶಾಸಕ ಎಂದು ಬೋರ್ಡ್ ಹಾಕಿಕೊಂಡು